ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—39ನೇ ಖಚಂ ಕಿತ್ತೂರು ರಾಣಿ ಚನ್ನಮ್ಮ ಸಹಕಾರಿ ಅಕ್ಕಿ ಗಿರಿಣಿಗೆ ಸರ್ಕಾರದವರು 225 ಸಾವಿರ ರೂಪಾಯಿಗಳನ್ನು ಷೇರು ಬಂಡವಾಳವಾಗಿ ಕೊಟ್ಟಿದೆ ಎಂಬುದಾಗಿ ಪರಿಶಿಷ್ಟದಲ್ಲಿ ಹೇಳಿದೆ. ಇದು ಚೆನ್ನಾಗಿ ಕೆಲಸಮಾಡಿದ್ದರೆ ಈಗ ಎಷ್ಟು ಡಿವಿಡೆಂಡ್ ಡಿಕ್ಲೇರ್ ಮಾಡಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮೊದಲೇ ಹೇಳಿದ್ದೇನೆ. ಪರಿಶಿಷ್ಟದ ಮೊದಲನೆ ಕ್ರಮ ಸಂಖ್ಯೆಯಿಂದ 41ನೇ ಕ್ರಮ ಸಂಖ್ಯೆಯವರೆಗೆ ಇರತಕ್ಕ ಅಕ್ಕಿಗಿರಿಣಿಗಳು ಇನ್ನೂ ಸ್ಥಾಪನೆಯಾಗಿಲ್ಲ.

Transport Charges of Jowar paid by the T. A. P. M. C. S. Ltd., Channapatna.

*Q.—206. Sri B. J. LINGE GOWDA (Channapatna).—

Will the Government be pleased to state :—

(*a*) the rate of transport charges paid by the Taluk Agricultural Produce Marketing Co-operative Society Ltd, Channapatna on the transport of 48 tons of Jowar from Bijapur to Channapatna during the month of September 1965 ;

(*b*) the reasons for payment of exhorbitant transport charges ?

A.—Sri K. PUTTASWAMY (Minister for Co-operation and Housing).—

(*a*) No jowar from Bijapur has been transported by the T. A. P. M. C. S. Ltd., Channapatna during the month of September 1965.

(*b*) Does not arise in view of reply to clause (*a*) above

ಶ್ರೀ ಬಿ. ಜೆ. ಲಿಂಗೇಗೌಡ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಈ ತಾಲ್ಲೂಕು ಸಹಕಾರ ಸಂಘದವರು ಬಿಜಾಪುರದಿಂದ ಜೋಳವನ್ನೇನೂ ಸಾಗಿಸಿರುವುದಿಲ್ಲವೆಂದು ಹೇಳಿದೆ. ಆದರೆ ಅದೇ ತಿಂಗಳಿನಲ್ಲಿ 48 ಟನ್ ಜೋಳವನ್ನು ಬಿಜಾಪುರದ ಅಕ್ಕ ಪಕ್ಕದ ತಾಲ್ಲೂಕುಗಳಿಂದ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಬಿಜಾಪುರದಲ್ಲಿರತಕ್ಕ ಸಿಂಧಗಿ ತಾಲ್ಲೂಕಿನ ಅಲಮೇಲು ಗ್ರಾಮದಿಂದ ತಂದಿದ್ದಾರೆ.

ಶ್ರೀ ಬಿ. ಜೆ. ಲಿಂಗೇ ಗೌಡ.—ಒಂದು ಕ್ವಿಂಟಾಲಿಗೆ ಸಾಗಾಣಿಕೆ ಖರ್ಚು ಎಷ್ಟು ಎಂಬುದಾಗಿ ಕೊಟ್ಟಿದ್ದಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—8 ರೂಪಾಯಿ 75 ಪೈಸೆ.

ಶ್ರೀ ಬಿ. ಜೆ. ಲಿಂಗೇಗೌಡ.—ಒಂದು ಕ್ವಿಂಟಾಲಿಗೆ 11½ರೂಪಾಯಿಗಳು ಕೊಟ್ಟಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಸರ್ಕಾರದ ಪರವಾಗಿ ಉತ್ತರ ಹೇಳುತ್ತಿದ್ದೇನೆ. ಒಂದು ಕ್ವಿಂಟಾಲಿಗೆ 8ರೂಪಾಯಿ 75 ಪೈಸೆಗಳಂತೆ ಕೊಟ್ಟಿದ್ದಾರೆ. ಮಾನ್ಯಸದಸ್ಯರು ಹೊಸದಾಗಿ ಅವಾಹಿತಿಯನ್ನು ಈಗ ಕೊಡುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಂಸ್ಥೆಗಳಲ್ಲಿ ಸರ್ಕಾರದ ಪರವಾಗಿ ನಾಮಿನಿಪಟ್ಟ ಇಲಾಖೆಯ ಅಧಿಕಾರಿ ಇರುವುದರಿಂದ ಸಾಗಾಣಿಕೆಯ ದರವನ್ನು ನಿಗದಿಮಾಡುವ ಕಾಲದಲ್ಲಿ ಅನುಸರಿಸುವ ಕ್ರಮಗಳಾವುವು ?

ಶ್ರೀ ಕೆ. ಪುಟ್ಟಸ್ವಾಮಿ.—ಇದಕ್ಕೆ ಒಂದು ಅಪ್ರೂವ್ಡ್ ರೇಟ್ ಇದೆ. ಆ ದರದ ಪ್ರಕಾರ ಮೊದಲನೆಯ ಮೈಲಿಗೆ ಕ್ವಿಂಟಾಲಿಗೆ 3 ಪೈಸೆಯಿಂತಲೂ, ಆಮೇಲೆ ಹೆಚ್ಚಳವಾದರೆ ಕ್ವಿಂಟಾಲಿಗೆ 2 ಪೈಸೆಯೆಂತಲೂ ನಿಗದಿಮಾಡಲಾಗಿದೆ.

Sri C. J. MUCKANNAPPA.—Will not the working of the co-operative society be affected by imposing such conditions ?

Sri K. PUTTASWAMY.—It is not so. In very many cases it is possible to work out according to the approved rates. In this particular case according to the approved rate it is Rs. 9.94. but according to contract rate it is Rs. 8. 75.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಸಂಘದವರು ಕ್ವಿಂಟಾಲಿಗೆ 11½ ರೂಪಾಯಿಗಳನ್ನು ಕೊಟ್ಟು ಸಾಗಾಣಿಕೆ ಮಾಡಿದ್ದಾರೆಂಬುದನ್ನು ಆಹಾರಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅದು ತನಿಖೆಯಾಗಿ ಆ ರೀತಿಯಾಗಿ ದರ ಕೊಟ್ಟಿರುವುದು ಬಹಳ ದುಬಾರಿ ಎಂಬುದಾಗಿ ತೀರ್ಮಾನ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Sri K. PUTTASWAMY.—It has not come to my notice. It may be a case of different transport of jowar from different place to Channapatna and I do not know under what circumstance it is done.

Sri K. LAKKAPPA.—May I know whether this co-operative society is run by an administrator or by an elected body ?

Sri K. PUTTASWAMY.—There is an elected body.

ಶ್ರೀ ಬಿ. ಜೆ. ಲಿಂಗೇಗೌಡ.—ಈ ವಿಚಾರದಲ್ಲಿ ಅವರು ಮಾಡುತ್ತಿರುವ ಅನ್ಯಾಯವನ್ನು ಪದೇ ಪದೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಕ್ವಿಂಟಾಲಿಗೆ 11½ರೂಪಾಯಿಗಳಷ್ಟು ಸಾಗಾಣಿಕೆ ದರವನ್ನು ಕೊಟ್ಟಿರುವುದು ಬಹಳ ದುಬಾರಿಯಾಗಿದೆ, ಇನ್ನೊಂದು ಕಡೆಯಲ್ಲಿ 7½ ರೂಪಾಯಿ ಗಳಂತೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಆ ವಿಚಾರವನ್ನು ಮೂರುನಾಲ್ಕು ಸಾರಿ ಹೇಳಿದ್ದೀರಿ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಯಾವ ಒಂದು ಪ್ರಶ್ನೆಯನ್ನು ಕೇಳಿದರೋ ಅದಕ್ಕೆ ಉತ್ತರ ಹೇಳಿದ್ದೇನೆ. ಸಿಂಧಗಿ ತಾಲ್ಲೂಕು ಅಲುಮೇಲು ಗ್ರಾಮದಿಂದ ಜೋಳವನ್ನು ಈ ಸಂಘದವರು ತಂದಿರುವ ವಿಚಾರವನ್ನು ಕರಾರುವಾಕ್ಕಾಗಿ ಹೇಳಿದ್ದೇನೆ. ಬೇರೆ ಕೇಸಿನ ವಿಷಯ ನನಗೆ ಗೊತ್ತಿಲ್ಲ. ಈಗ ಅದನ್ನು ಮಾನ್ಯ ಸದಸ್ಯರು ತಿಳಿಸುತ್ತಿದ್ದಾರೆ, ವಿಚಾರಮಾಡುತ್ತೇನೆ.

Sri K. LAKKAPPA.—Was not this society at one stage superseded at the instance of the member who has been elected from that constituency to this House ?

Mr. SPEAKER.—The last part of the question is disallowed. The first part may be answered.

Sri K. PUTTASWAMY.—This society was under the administrator for some time and an election was held and there is elected body.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ಆ ರೇಟುಗಳನ್ನು ಮೂರು ಸಾರಿ ಹೇಳಿದರು ಒಂದು ಸಾರಿ ಎಂಟು ರೂಪಾಯಿ 75 ನಯಾ ಪೈಸಾ ಎಂದು ಹೇಳಿದರು, ಒಂದು ಸಾರಿ ಏಳು ರೂಪಾಯಿ ಎಂದು ಹೇಳಿದರು, ಇನ್ನೊಂದು ಸಾರಿ 11½ ರೂಪಾಯಿ ಎಂದು ಹೇಳಿದರು. ಎಷ್ಟು ರೇಟು ಎಂಬುದು ಸರ್ಕಾರದವರಿಗೆ ಖಚಿತವಾಗಿ ಗೊತ್ತಿಲ್ಲವೇ ?

Sri K. PUTTASWAMY.—Sir, that is the inference of the Hon'ble member. I have been categorically stating that the rate that has been paid is Rs. 8.75.

ಶ್ರೀ ಜಿ. ರಾಮೇಗೌಡ.—ಆ ಸಂಘವನ್ನು ಸೂಪರ್-ಸೀಡ್ ಮಾಡಿ ಅದಕ್ಕೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದಮೇಲೆ ಆ ಚಾರ್ಜು ಹಿಂದೆ ಇದ್ದಷ್ಟೇ ಇದೆಯೇ, ಅಥವಾ ಅದಕ್ಕಿಂತ ಕಡಿಮೆ ಇದೆಯೇ ?

Sri K. PUTTASWAMY.—If approved rate has not been subsequently changed, this rate might have prevailed.